ದಿನಾಂಕ 25.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಬಿ.ಆರ.ಎಸ್ ವಕೀಲರಿಂದಃ-**

ದಿನಾಂಕ 12.02.1968 ರ ಕ್ರಯಪತ್ರವನ್ನು ನಾನು ಓದಿರುತ್ತೇನೆ. ಸದರಿ ಕ್ರಯಪತ್ರದಡಿ ಗಣಪತಿಯವರು ಮುತ್ತಣ, ತಮ್ಮಯ್ಯ ಮತ್ತು ಪೊನ್ನಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ನಮೂದಿಸಿರುವ ಸ್ವತ್ತು ಗಣಪತಿಯವರ ಪಿತ್ರಾರ್ಜಿತ ಆಸ್ತಿ. ಗಣಪತಿಯವರಿಗೆ ಐದು ಜನ ಮಕ್ಕಳು. 1968 ನೇ ಇಸವಿಯಲ್ಲಿ ಗಣಪತಿಯವರ ಇಬ್ಬರು ಮಕ್ಕಳು ಪ್ರಾಪ್ತ ವಯಸ್ಕರಾಗಿದ್ದು, ಉಳಿದ ಮಕ್ಕಳ ವಯಸ್ಸು ನನಗೆ ಗೊತ್ತಿಲ್ಲ. 1968 ನೇ ಇಸವಿಯ ಕ್ರಯಪತ್ರಕ್ಕೆ ಗಣಪತಿಯವರ ಮಕ್ಕಳು ಸಹಿ ಮಾಡಿರುವುದಿಲ್ಲ. ಗಣಪತಿಯವರ ಮಕ್ಕಳು ಲಿಖಿತವಾಗಿ ಸಮ್ಮತಿಯನ್ನು ನನಗೆ ನೀಡಿರುವುದಿಲ್ಲ. ನಾನು ದಿನಾಂಕ 12.02.1968 ನೇ ಇಸವಿಯ ಕ್ರಯಪತ್ರದಡಿ ಗಣಪತಿಯವರಿಂದ ಒಂದು ಎಕರೆ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. 1968 ನೇ ಇಸವಿಯ ಕ್ರಯಪತ್ರದಡಿ 6 ಎಕರೆ 62 ಸೆಂಟ್ಸ್ ಜಾಗವನ್ನು ಗಣಪತಿಯವರು ಮಾರಾಟ ಮಾಡಿರುತ್ತಾರೆ.

ದಿನಾಂಕ 15.05.1985 ಇಸವಿಯ ಕ್ರಯಪತ್ರದಡಿ 5 ಎಕರೆ 62 ಸೆಂಟ್ಸ್ ಜಾಗವನ್ನು ನಾನು ಮುತ್ತಣ್ಣ, ತಮ್ಮಯ್ಯ ಮತ್ತು ಪೊನ್ನಪ್ಪರವರಿಂದ ಖರೀದಿಸಿರುತ್ತೇನೆ. ದಿನಾಂಕ 12.02.1968 ಮತ್ತು 15.05.1985 ರ ಕ್ರಯಪತ್ರಗಳಲ್ಲಿ ಮಾರಾಟ ಮಾಡಿದ ಸ್ವತ್ತುಗಳ ಸರ್ವೆ ನಂಬರ ಒಂದೇ ಆಗಿದೆ. ಚೆಕ್ಕು ಬಂಧಿ ಒಂದೇ ಇದೆಯೋ

ಇಲ್ಲವೋ ನನಗೆ ಗೊತ್ತಿಲ್ಲ. 2019 ರ ವರೆಗೆ ಕ್ರಯಪತ್ರವನ್ನು ಹೊರತುಪಡಿಸಿ ಯಾವುದೇ ಕಂದಾಯ ದಾಖಲೆಗಳು ನನ್ನ ಹೆಸರಿನಲ್ಲಿ ಸರ್ವೆ ನಂ. 150 ಕ್ಕೆ ಸಂಬಂಧಿಸಿದಂತೆ ದಾಖಲಾಗಿರಲಿಲ್ಲ. ನ್ಯಾಯಾಲಯದಲ್ಲಿ ಈ ಪ್ರಕರಣ ಇತ್ಯರ್ಥಕ್ಕಾಗಿ ಬಾಕಿ ಇದ್ದಾಗ ನಾನು ದಾವಾ ಸ್ವತ್ತಿನ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. ಸಾಕ್ಷಿಯು ಮುಂದುವರೆದು ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡುವಂತೆ ಅರ್ಜಿಯನ್ನು ನಾನು ದಾವೆಯನ್ನು ದಾಖಲಿಸುವ ಪೂರ್ವದಲ್ಲಿಯೇ ಕಂದಾಯ ಇಲಾಖೆಗೆ ಸಲ್ಲಿಸಿದ್ದೆನು. ನಾನು ಅರ್ಜಿಯನ್ನು 1986 - 1987 ನೇ ಇಸವಿಯಲ್ಲಿ ನೀಡಿದ್ದೆನು. ನಾನು ಸಲ್ಲಿಸಿದ್ದ ಅರ್ಜಿಯ ಮೇಲೆ ರೆವಿನ್ಯೂ ಅಪೀಲ್ ನಂಬರ 125/2017-18 ದಾಖಲಾಗಿತ್ತು ಎಂದರೆ ಸರಿ. ನಾನು ಅರ್ಜಿಯನ್ನು 1986-1987 ನೇ ಇಸವಿಯಲ್ಲಿ ನೀಡಿದ್ದ ಬಗ್ಗೆ ಹಾಗೂ ನನ್ನ ಅರ್ಜಿ ವಿಲೇವಾರಿಗಾಗಿ 1986 ರಿಂದ 2018 ರವರೆಗೆ ಬಾಕಿ ಇದ್ದ ಬಗ್ಗೆ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ರೆವಿನ್ಯೂ ಅಪೀಲ್ ನಂಬರ 125/2017-18 ರಲ್ಲಿ ದಿನಾಂಕ 22.02.2018 ರಲ್ಲಿ ನನ್ನ ಪರವಾಗಿ ಆದೇಶವಾಗಿರುತ್ತದೆ. ನಾನು ಕಂದಾಯ ದಾಖಲೆಗಳ ವರ್ಗಾವಣೆಗೆ 1986-1987 ನೇ ಸಾಲಿನಲ್ಲಿ ಅರ್ಜಿಯನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಿನಾಂಕ 15.05.1985 ನೇ ಇಸವಿಯಲ್ಲಿ ಮುತ್ತಣ್ಣ, ತಮ್ಮಯ್ಯ ಮತ್ತು ಪೊನ್ನಪ್ಪರವರ ಹೆಸರಿನಲ್ಲಿ ಕಂದಾಯ ದಾಖಲೆಗಳು ಇರಲಿಲ್ಲ ಎಂದರೆ ಸರಿ. ಕಂದಾಯ ದಾಖಲೆಗಳ ಅನುಪಸ್ಥಿತಿಯಲ್ಲಿ ನಾನು ಕ್ರಯ ಪತ್ರವನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ. ದಿನಾಂಕ 15.05.1985 ನೇ ಇಸವಿಯಲ್ಲಿ ದಾವಾಸ್ವತ್ತಿನ ಜಮಾಬಂಧಿ

ದಾಖಲೆಗಳು ವಾದಿಗಳ ಅಜ್ಜನಾದ ಕಾಳಯ್ಯರವರ ಹೆಸರಿನಲ್ಲಿ ಇದ್ದವು.

ಅಸಲು ದಾವಾ ಸಂಖ್ಯೆ 38/1977 ರ ವಾದಪತ್ರವನ್ನು ನಾನು ಓದಿರುತ್ತೇನೆ, ಅದನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿದ್ದೇನೆ. ಸದರಿ ದಾವೆಯನ್ನು ಸರ್ವೆ ನಂ. 150 ರ 6 ಎಕರೆ 62 ಸೆಂಟ್ಸ್ ಜಾಗಕ್ಕೆ ಸಂಬಂಧಿಸಿದಂತೆ ದಾಖಲಿಸಲಾಗಿದೆ. ಪಿ.ಜಿ ಸುಬ್ಬಯ್ಯ, ಪಿ.ಜಿ ದೇವಯ್ಯ, ಪಿ.ಜಿ ಕುಟ್ಟಪ್ಪ, ಪಿಜಿ ಮಂದಯ್ಯ ಮತ್ತು ಪಿ.ಜಿ ರಾಜ ರವರು ಸರ್ವೆ ನಂ. 150 ರ 6 ಎಕರೆ 62 ಸೆಂಟ್ಸ್ ಜಾಗಕ್ಕೆ ಸಂಬಂಧಿಸಿದಂತೆ ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟಿರುವವುದಿಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದಲ್ಲಿ ರಾಜೀ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ರಾಜೀ ಅರ್ಜಿಯಲ್ಲಿ ಆಸ್ತಿಯ ಶೆಡ್ಯೂಲ್ ಅನ್ನು ನಮೂದಿಸಿರುವುದನ್ನು ನಾನು ನೋಡಿರುವುದಿಲ್ಲ. ಅಸಲುದಾವಾ ಸಂಖ್ಯೆ 38/77, ಅಮಲ್ ಜಾರಿ ಪ್ರಕರಣ ಸಂಖ್ಯೆ 67/79 ರಲ್ಲಿ ನಾನು ಪಕ್ಷಗಾರನಲ್ಲ .

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.